ರೂಪಾಯಿ ಇದ್ದು ಅದನ್ನು ಕೊನೆಯ ಬಿಲ್ ಮಾಡುವ ಕಾಲಕ್ಕೆ ವಜಾ ಮಾಡುವಂತಹ ಸಂಪ್ರದಾಯ ಇದ್ದುದರಿಂದ ಕೊನೆಯಲ್ಲಿ ವಜಾ ಮಾಡುತ್ತೇವೆ. ಈಗ ಕೋಣೆಗಳು ಸಂಪೂರ್ಣವಾಗಿ ತಯಾರಾಗಿವೆ. ಅದನ್ನು ಇಷ್ಟರಲ್ಲಿಯೇ ಅವರ ಕಬ್ಜಾಕ್ಕೆ ಒಪ್ಪಿಸುತ್ತಿದ್ದೇವೆ.

ಶ್ರೀ ಬಾಬುರಾವ್ ಚವಾಣ್ : ಸನ್ಮಾನ್ಯ ಅಧ್ಯಕ್ಷರೇ, ಈ ಭೂ ಸೇನಾ ನಿಗಮದವರು ಸಾಮಾನ್ಯವಾಗಿ ಕಟ್ಟಡ ರೆಡಿ ಆದ ನಂತರ ಹೇಗೆ ರೆಡಿ ಮಾಡಿದ್ದಾರೆ, ಏನು ಮಾಡಿದ್ದಾರೆ ಎನ್ನುವುದನ್ನು ಶಾಸಕರ ಗಮನಕ್ಕೆ ತರಬಾರದೇ, ಎಸ್ಟಿಮೇಟ್‌ನಲ್ಲಿ ಇರತಕ್ಕಂಥ ಕ್ವಾಲಿಟಿ, ಕ್ವಾಂಟಿಟಿ ಏನು ಇದೆ ಅದನ್ನೂ ಕೂಡ ಸರಿಯಾಗಿ ಮಾಡಲಾರದೆ, ನೇರವಾಗಿ ಶಿಕ್ಷಣ ಇಲಾಖೆಯವರಿಗೆ ಒಪ್ಪಿಸಿಬಿಡುತ್ತಾರೆ. ಒಪ್ಪಿಸಿದ ನಂತರ ನಾಲ್ಕೈದು ತಿಂಗಳಲ್ಲಿ ಮಳೆ ಬಂದರೆ ಸೋರತಕ್ಕಂತಹ ಎಷ್ಟೋ ಬಿಲ್ಡಿಂಗ್‌ಗಳನ್ನು ನಾನು ಕಣ್ಣಾರೆ ನೋಡಿದ್ದೇನೆ. ಮಾನ್ಯ ಮಂತ್ರಿಗಳು ಇದನ್ನು ಹೇಳಬೇಕು. ಈ ಭೂಸೇನೆ ನಿಗಮದವರು ಅವಸರವಸರದಲ್ಲಿ ಕಟ್ಟಿ ಅದನ್ನು ಶಿಕ್ಷಣ ಇಲಾಖೆಯವರಿಗೆ ಏನು ಹ್ಯಾಂಡ್‌ಓವರ್ ಮಾಡುತ್ತಾರೆ, ಅದು ಸರಿಯಾಗಿ ಮಾಡುವುದಿಲ್ಲ. ಅದಕ್ಕೋಸ್ಕರ ತಾವು ಭೂಸೇನಾ ನಿಗಮದವರಿಗೆ ಹಿಡಿತ ಹಾಕುತ್ತೀರ ಅಥವಾ ಹಾಕುವುದಿಲ್ಲವೇ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ. ರಾಜಶೇಖರಮೂರ್ತಿ : ಅಧ್ಯಕ್ಷರೇ, ಅದರಲ್ಲಿ ರೂಫ್ ಹಾಕಬೇಕಾದರೆ ಸ್ಪೇರ್ಸ್ ಸ್ಲಾಬ್ಸ್ ಇಟ್ಟು ರೂಫ್ ಹಾಕುತ್ತಿದ್ದರು. ಆ ರೂಫ್ ಹಾಕಿದರೆ ಅದನ್ನು ಓಪನ್ ಮಾಡುವ ದಿವಸದಿಂದಲೇ ಮಳೆಯಿಂದ ಸೋರುವುದಕ್ಕೆ ಶುರುವಾಯಿತು. ಈಚೆಗೆ ಏನು ಮಾಡಿದ್ದಾರೆಂದರೆ ಇನ್ನು ಆ ಸ್ಲಾಬ್ಸ್ ಹಾಕಿ ರೂಫ್ ಹಾಕುವುದು ಬೇಡ, ಆರ್.ಸಿ.ಸಿ. ಹಾಕಬೇಕು ಎಂದು ಮಾಡಿದ್ದಾರೆ. ಆ ತಪ್ಪು ಹಿಂದೆ ಏನಾಯಿತು ಅದು ಈಚೆಗೆ ರೆಕ್ಟಿಫೈ ಆಗುತ್ತಿದೆ.

ಅಧ್ಯಕ್ಷರು : ಶ್ರೀಮಾನ್ ಸಿಂಧ್ಯಾರವರೇ, ಕೃಷಿ ಮಂತ್ರಿಗಳು ನಿನ್ನೆ ದೆಲ್ಲಿಗೆ ಹೋಗಬೇಕಾಗಿರುವುದರಿಂದ ಲೆಟರ್ ಕೊಟ್ಟು ಹೋಗಿದ್ದಾರೆ. ಆದ್ದರಿಂದ ನಿಮ್ಮ ಪ್ರಶ್ನೆಯನ್ನು ಮುಂದೆ ತೆಗೆದುಕೊಳ್ಳೋಣ.

<u>ವಿಷಯ : ರಾಜ್ಯದಲ್ಲಿನ ಕೊಳವೆ ಬಾವಿಗಳ ದುರಸ್ತಿಗೆ ಕ್ರಮ.</u>

1451

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಪ್ರದೇಶದಲ್ಲಿ ಕೆಟ್ಟಿರುವ ಕೊಳವೆ ಬಾವಿಗಳನ್ನು ದುರಸ್ತಿಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ರಾಜ್ಯದಲ್ಲಿರುವ ಒಟ್ಟು ಕೊಳವೆ ಬಾವಿಗಳೆಷ್ಟು?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ಯ ಸಚಿವರು) :

ಅ) 1. 1-4-87ರ ನಂತರ ಕೈಪಂಪುಗಳ ನಿರ್ವಹಣೆಯನ್ನು ಮಂಡಲ ಪಂಚಾಯತಿಗೆ ವಹಿಸಲಾಗಿದೆ. ಪ್ರತಿ ತಾಲ್ಲೂಕಿನಲ್ಲಿರುವ ಜಿಲ್ಲಾಪರಿಷತ್ ಇಂಜಿನಿಯರಿಂಗ್ ಉಪ-ವಿಭಾಗಗಳು ಮಂಡಲ ಪಂಚಾಯಿತಿಗೆ ಬೆಂಬಲ ನೀಡುತ್ತದೆ.

2. ಜಿಲ್ಲಾಪರಿಷತ್ ಇಂಜಿನಿಯರಿಂಗ್ ವಿಭಾಗದಿಂದ ಆಯ್ಕೆಯಾಗಿ ಭೂಮಿ ಮೇಲಿರುವ ಕೈಪಂಪುಗಳ ಭಾಗವನ್ನು ದುರಸ್ತಿ ಮಾಡಲು ತರಬೇತಿ ಪಡೆದ ರಕ್ಷಕರು ಇರುತ್ತಾರೆ.
3. ರಕ್ಷಕರು: ಯಾಂತ್ರಿಕರ ಕೈ ಮೀರಿದ ಪಕ್ಷದಲ್ಲಿ ತಾಲ್ಲೂಕಿನ ಕೇಂದ್ರ ಕಛೇರಿಯಲ್ಲಿರುವ ಸಂಚಾರಿ ವಾಹನದ ತಂಡವು ದುರಸ್ತಿಯ ಕೆಲಸವನ್ನು ಮಾಡುತ್ತದೆ.

ಆ) 1,24,935 ಕೊಳವೆ ಬಾವಿಗಳು.
(ಜನವರಿ 93ರ ಅಂತ್ಯದವರೆಗೆ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಕೊಳವೆಬಾವಿಗಳು ಎಷ್ಟಿವೆ ಎಂಬುದನ್ನು ಕೊಟ್ಟಿದ್ದಾರೆ. ಆದರೆ ಇದರಲ್ಲಿ ಕೆಟ್ಟಿರತಕ್ಕ ಕೊಳವೆ ಬಾವಿಗಳೆಷ್ಟು, ಅವುಗಳ ರಿಪೇರಿಗೆ ಕೈಗೊಂಡಿರತಕ್ಕ ಕ್ರಮ ಏನು ಎಂಬುದು ಮುಖ್ಯವಾದುದು. ಈ ರಿಪೇರಿ ಕೆಲಸವನ್ನು ಮಂಡಲಪಂಚಾಯಿತಿಗೆ ವಹಿಸಿದ್ದೇವೆಂದು ಹೇಳಿದ್ದಾರೆ. ಅದಕ್ಕಾಗಿ ಒಂದು ವ್ಯಾನನ್ನು ಇಟ್ಟಿದ್ದೇವೆ ಎಂದು ಹೇಳಿದ್ದಾರೆ. ಆದರೆ ಆ ವ್ಯಾನ್ ಎಲ್ಲಿದೆ ? ರಿಪೇರಿ ಮಾಡುವವರು ಎಲ್ಲಿದ್ದಾರೆ, ಎಲ್ಲಾ ಅವ್ಯವಸ್ಥೆಯಾಗಿದೆ. ನಮ್ಮ ರಾಜ್ಯದಲ್ಲಿ ಎಲ್ಲೂ ಕೂಡ ಈ ಕೊಳವೆಬಾವಿ ರಿಪೇರಿ ಆಗುತ್ತಿಲ್ಲ. ಕಳೆದ 2 ತಿಂಗಳಿಂದ ಕೊಳವೆ ಬಾವಿಗಳೆಲ್ಲಾ ಕುಲಗೆಟ್ಟು ಹೋಗಿವೆ; ರಿಪೇರಿಗೋಸ್ಕರ ವಿಶೇಷ ದಳವನ್ನೇನಾದರೂ ನೇಮಿಸುತ್ತೀರಾ? ಅದುವರೆಗೆ ಜನರಿಗೆ ಕುಡಿಯುವ ನೀರನ್ನೊದಗಿಸಲು ಏನಾದರೂ ಬೇರೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಂ. ಮೈ. ಘೋರ್ಪಡೆ : ಕೆಟ್ಟಿರತಕ್ಕ ಕೊಳವೆಬಾವಿಗಳ ರಿಪೇರಿ ಕೆಲಸ ಅವಶ್ಯಕವಾಗಿದೆ ಎಂಬುದು ಸರ್ಕಾರಕ್ಕೆ ಗೊತ್ತಿದೆ. ಅದಕ್ಕೆ ಮಾಡಿರತಕ್ಕ ವ್ಯವಸ್ಥೆ ಏನೆಂಬುದನ್ನು ನನ್ನ ಉತ್ತರದಲ್ಲಿ ಹೇಳಿದ್ದೇನೆ. ತಾಲೂಕು ಮಟ್ಟದಲ್ಲಿ ಮೊಬೈಲ್ ಯೂನಿಟ್ ಏನಿದೆ ಅದನ್ನು ನಾವು ಹೆಚ್ಚು ಹೆಚ್ಚು ಉಪಯೋಗಿಸಿಕೊಳ್ಳಬೇಕು. ಸ್ಥಳೀಯವಾಗಿ ಗ್ರಾಮಾಂತರ ಪ್ರದೇಶದಲ್ಲಿ ರಿಪೇರಿ ಬಗ್ಗೆ ಟ್ರೈನಿಂಗ್ ಕೊಡತಕ್ಕ ವ್ಯವಸ್ಥೆ ನಡೆದಿದೆ. ಇದು ಎಷ್ಟರ ಮಟ್ಟಿಗೆ ಸಫಲವಾಗಿದೆ, ಎಂಬುದು ಗೊತ್ತಿಲ್ಲ. ಮೈಸೂರಿನಲ್ಲಿ ಈ ಒಂದು ಪ್ರಯೋಗ ನಡೆದಿದೆ. ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಒಂದು ಮೊಬೈಲ್ ಯೂನಿಟನ್ನು ಮಾಡಬೇಕೆಂದು ನಾನು ಹಿಂದೆ ಗ್ರಾಮಾಭಿವೃದ್ಧಿ ಮಂತ್ರಿಯಾಗಿದ್ದಾಗ ಹೇಳಿದ್ದೆ. ಮೊಬೈಲ್ ಯೂನಿಟ್‌ನವರು ಒಂದು ನಿರ್ದಿಷ್ಟ ಕಾರ್ಯಕ್ರಮವನ್ನು ಹಾಕಿಕೊಂಡು ಪ್ರತಿಯೊಂದು ತಾಲೂಕಿನಲ್ಲಿ ಎಲ್ಲೆಲ್ಲಿ ಬೋರ್‌ವೆಲ್ಸ್ ಕೆಟ್ಟಿವೆ ಅಲ್ಲಿಗೆ ಹೋಗಿ ರಿಪೇರಿ ಮಾಡತಕ್ಕದ್ದು ಇರುವುದು ಒಂದೇ ಮಾರ್ಗ. ನಮ್ಮ ತಾಲ್ಲೂಕಿನಲ್ಲಿ ಇದು ಬಹಳ ಯಶಸ್ವಿಯಾಗಿ ನಡೆದಿದೆ. ಆದ್ದರಿಂದ ಎಲ್ಲಾ ಕಡೆಯಲ್ಲೂ ಈ ವ್ಯವಸ್ಥೆಯನ್ನು ಉಪಯೋಗಿಸಿಕೊಳ್ಳಬೇಕು. ಇದರ ಬಗ್ಗೆ ನಿರ್ದಿಷ್ಟ ಕಾರ್ಯಕ್ರಮವನ್ನು ಹಾಕಿಕೊಂಡು ಯಾವ ಯಾವ ಜಿಲ್ಲೆಗಳಲ್ಲಿ ಬೋರ್‌ವೆಲ್ ರಿಪೇರಿ ಅವಶ್ಯಕತೆ ಇದೆ ಅಲ್ಲಿಗೆ ಮೊಬೈಲ್ ಯೂನಿಟ್ಸ್‌ನ್ನು ಕಳುಹಿಸಿ ರಿಪೇರಿ ಮಾಡಿಸಬೇಕು. ಆಗ ಮಾತ್ರ ಈ ತೊಂದರೆಯನ್ನು ನಿವಾರಿಸಲು ಅನುಕೂಲವಾಗುತ್ತದೆ. ಬೇಸಿಗೆ ಜಾಸ್ತಿಯಾದಾಗ ತುರ್ತು ರಿಪೇರಿ ಕೆಲಸದ ಅಗತ್ಯತೆ ಜಾಸ್ತಿಯಾಗಿರುತ್ತದೆ. ನಮಗಿರತಕ್ಕ ಸಿಬ್ಬಂದಿಯನ್ನು ಸರಿಯಾಗಿ ಉಪಯೋಗ ಮಾಡಿಕೊಂಡು ನಮ್ಮ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಗಾಯ ಎಲ್ಲಿದೆ ಎಂಬುದನ್ನು ತಾವು ಪತ್ತೆ ಹಚ್ಚಬೇಕು. ರಿಪೇರಿ ಕೆಲಸವನ್ನು ಮಂಡಲಪಂಚಾಯಿತಿಗೆ ವಹಿಸಿದ್ದೇವೆಂದು ಹೇಳುತ್ತಿದ್ದೀರಿ. ಆದರೆ ಅವರಲ್ಲಿ ಹಣ ಇಲ್ಲ. ಆದ್ದರಿಂದ ಈ ರಿಪೇರಿ ಕೆಲಸದ ವ್ಯವಸ್ಥೆಯನ್ನು ಜಿಲ್ಲಾ ಪರಿಷತ್ತಿಗೆ ವಹಿಸಿಕೊಡಬೇಕು. ನಿಮ್ಮ ಮೊಬೈಲ್ ವ್ಯಾನ್ ಏನಿದೆ ಅದಕ್ಕೆ ಟೈರ್ ಇದ್ದರೆ ಟ್ಯೂಬ್

ಇರುವುದಿಲ್ಲ, ಟ್ಯೂಬ್ ಇದ್ದರೆ ಟೈರ್, ಸ್ಟೇರಿಂಗ್ ಇರುವುದಿಲ್ಲ. ವರ್ಷಕ್ಕೆ 2 ಸಾರಿ ರಿಪೇರಿ ಎಂದು ಹೋಗುತ್ತದೆ ಯಾವುದೇ ಮಂಡಲ ಪಂಚಾಯಿತಿಯಲ್ಲೂ ಹಣ ಇಲ್ಲದಿರುವುದರಿಂದ ಈ ರಿಪೇರಿ ಕೆಲಸವನ್ನು ನೀವು ಜಿಲ್ಲಾಪರಿಷತ್ತಿಗೆ ವಹಿಸಿಕೊಡಬೇಕು. ಅವರಿಗೆ ಹೆಚ್ಚಿನ ಹಣವನ್ನೊದಗಿಸಿ ಪರಿಣಾಮಕಾರಿಯಾಗಿ ಕೆಲಸ ಮಾಡಿಸಬೇಕು. ಕಳೆದ ಎರಡು ತಿಂಗಳಿಂದ ಅತ್ಯಂತ ಗಂಭೀರವಾದ ಪರಿಸ್ಥಿತಿ ಇದೆ. ಮುಂದೆ ಇನ್ನೂ ಗಂಭೀರ ಪರಿಸ್ಥಿತಿ ಉದ್ಭವವಾಗುತ್ತದೆ. ಇದರ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಎಂ. ವೈ. ಘೋರ್ಪಡೆ : 1-4-87ರ ನಂತರ ಈ ಜವಾಬ್ದಾರಿಯನ್ನು ಮಂಡಲ ಪಂಚಾಯಿತಿಗಳಿಗೆ ಕೊಟ್ಟಿದೆ. ಆದರೆ ಇವರಿಂದ ಈ ಜವಾಬ್ದಾರಿಯನ್ನು ನಿರ್ವಹಿಸಲು ಸಾಧ್ಯವಿಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಜಿಲ್ಲಾಪರಿಷತ್ತಿನ ಇಂಜಿನಿಯರಿಂಗ್ ವಿಭಾಗದವರಿಗೆ ಈ ಕೆಲಸವನ್ನು ವಹಿಸಿ ಅವರಿಗೇ ಸಹಾಯ ಮಾಡಬೇಕೆಂದು ನಾವು ಮಾಡಿದ್ದೇವೆ. ತಾಲ್ಲೂಕು ಮಟ್ಟದಲ್ಲಿರತಕ್ಕ ಮೊಬೈಲ್ ಯೂನಿಟ್ಸ್ ವ್ಯವಸ್ಥೆ ಬಹಳ ಮಹತ್ವವುಳ್ಳದ್ದು ಎಂಬುದನ್ನು ನಾನು ಒತ್ತಿಹೇಳುತ್ತೇನೆ. ಎಲ್ಲಾದರೂ ಮೊಬೈಲ್ ಯೂನಿಟ್ಸ್ ಸರಿಯಾಗಿ ಕೆಲಸಮಾಡುತ್ತಿಲ್ಲ ಎಂಬುದನ್ನು ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತಂದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಇದೇ ಉದ್ದೇಶದಿಂದ ಜಿಲ್ಲಾಧಿಕಾರಿಗಳನ್ನು ಮತ್ತು ಚೀಫ್ ಸೆಕ್ರೆಟರಿಗಳನ್ನು ಬೆಂಗಳೂರಿಗೆ ಕರೆಯಿಸಿಕೊಂಡು ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಈ ಬೇಸಿಗೆಯ ತಾಪ ಜಾಸ್ತಿಯಾಗುವುದಕ್ಕೆ ಮೊದಲು ಚರ್ಚೆ ಮಾಡಬೇಕೆಂದು ತಿಳಿಸಿದ್ದೇವೆ. ಯಾವ ಯಾವ ತಾಲ್ಲೂಕಿನಲ್ಲಿ ಈ ವ್ಯವಸ್ಥೆಯನ್ನು ಬಲಪಡಿಸುವ ಅವಶ್ಯಕತೆ ಇದೆಯೋ ಅದನ್ನು ನಾವು ಮಾಡುತ್ತೇವೆ. We accept that the repair programme at the taluk level must be streamlined and strengthened which is very important. ನಮ್ಮ ಕರ್ನಾಟಕದಲ್ಲಿ 1.24 ಲಕ್ಷ ಬೋರ್‌ವೆಲ್‌ಗಳಿವೆ. ಇದರಿಂದಾಗಿ ಈ ಮೊಬೈಲ್ ಯೂನಿಟ್‌ಗಳ ಅವಶ್ಯಕತೆ ಎಷ್ಟಿದೆ ಎಂಬುದು ಸರ್ಕಾರಕ್ಕೆ ಗೊತ್ತಿದೆ. We will try to streamline and strengthen the repair arrangement of clear cut programme of going round the taluks for the next 3 months.

ಶ್ರೀ ಎ. ಎಸ್. ನಾಡಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜುರವರು ಹೇಳಿದಂತೆ ಮಂಡಲ ಪಂಚಾಯಿತಿಯಲ್ಲಿ ಹಣವಿಲ್ಲ. ಈಗ ಎನರ್ಜೈಸ್ ಆಗಿರತಕ್ಕ ಬೋರ್‌ವೆಲ್ ಪಂಪ್‌ಸೆಟ್ಟುಗಳು ಏನಿವೆ ಅವುಗಳು ಕೆಟ್ಟಾಗ ರಿಪೇರಿಗಾಗಿ ಲೋಕಲ್‌ನಲ್ಲಿ ಟೆಕ್ನಿಕಲಿ ಅನ್‌ಸೌಂಡ್ ಆಗಿರುವವರಿಗೆ ಕೊಡುತ್ತಾರೆ. ಇದಕ್ಕೆ ಬದಲು ಜಿಲ್ಲಾಪರಿಷತ್ತಿನಲ್ಲಿ ಇರತಕ್ಕ ಮೆಕ್ಯಾನಿಕಲ್ ಡಿವಿಜನ್‌ನಲ್ಲಿ ಎಲೆಕ್ಟ್ರಿಕಲ್ ಸೆಕ್ಷನ್‌ನನ್ನು ಮಾಡಿ, ಕೆಟ್ಟುಹೋದ ಪಂಪ್‌ಸೆಟ್ಟುಗಳನ್ನು ರಿಪೇರಿ ಮಾಡಿಸುವಂಥ ಯೋಜನೆ ಮಾಡುತ್ತೀರಾ?

ಶ್ರೀ ಎಂ. ವೈ. ಘೋರ್ಪಡೆ : ಇದರಲ್ಲಿ ಸಬ್‌ಡಿವಿಜನ್ ನೇರವಾದ ಆಸಕ್ತಿವಹಿಸ ಬೇಕೆಂದಿದೆ. ಅವರು ಏನು ಮಾಡುತ್ತಿದ್ದಾರೆಂದು ನೋಡಬೇಕು. ಮಾನ್ಯ ಸದಸ್ಯರು ಅದು ಅಷ್ಟು ತೃಪ್ತಿಕರವಾಗಿ ಕೆಲಸಮಾಡುತ್ತಿಲ್ಲವೆಂದು ಏನು ಹೇಳುತ್ತಿದ್ದಾರೆ ಅದನ್ನು ಸ್ಟ್ರೀಮ್‌ಲೈನ್ ಮಾಡಿ ಸ್ಪಷ್ಟವಾದ ಪ್ರೋಗ್ರ್ಯಾಂನ್ನು ಹಾಕಬೇಕಾಗಿದೆ....

ಶ್ರೀ ಎ. ಎಸ್. ನಾಡಗೌಡ : ಪಂಪ್‌ಸೆಟ್ಟು ರಿಪೇರಿ ಮಾಡುವುದಕ್ಕೆ ಬೇರೆ ಏಜೆನ್ಸಿಗೆ ಕೊಡುವುದು ಬೇಡ. ಜಿಲ್ಲಾ ಪರಿಷತ್ತಿನ ಇಂಜಿನಿಯರಿಂಗ್ ವಿಭಾಗದಲ್ಲಿ ರಿಪೇರಿ ಮಾಡತಕ್ಕ ವ್ಯವಸ್ಥೆ ಆಗಬೇಕು. ಅವರಿಗೆ ಟೆಕ್ನಿಕಲ್ ನಾಲೆಡ್ಜ್ ಇಲ್ಲ. ಅವರು ಹಾಕಿದ ನಾಲ್ಕೇ ದಿನದಲ್ಲಿ

ಪಂಪ್ ಸುಟ್ಟು ಹೋಗುತ್ತವೆ. ಅದಕ್ಕೆ ತಮ್ಮ ವಿಭಾಗದಲ್ಲಿ ಅದನ್ನು ಏತಕ್ಕೆ ಸ್ಟಾರ್ಟ್ ಮಾಡಬಾರದೆಂದು ನನ್ನ ಪ್ರಶ್ನೆ.

Sri M. Y. Ghorpade : That is the present position. It is only the question of more effective implementation.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಹಿರಿಯ ಸಚಿವರಾದಂಥ ಮಾನ್ಯ ಘೋರ್ಪಡೆಯವರಿಗೆ ಇದು ಗೊತ್ತಿರುವಂಥ ವಿಷಯ. ದಯವಿಟ್ಟು ತಾವು ಒಂದು ಸದನದ ಸಮಿತಿಯನ್ನು ಮಾಡಿ ಕಳುಹಿಸಿಕೊಡಲಿ. 1.24 ಸಾವಿರ ಬೋರ್‌ವೆಲ್‌ಗಳಲ್ಲಿ, 50 ಸಾವಿರಕ್ಕೂ ಹೆಚ್ಚು ಬೋರ್‌ವೆಲ್‌ಗಳು ಕೆಟ್ಟಿವೆ. ನಾನು ನನ್ನ ತಾಲ್ಲೂಕಿನಲ್ಲಿ ನೋಡಿಬಂದಿದ್ದೇನೆ. ಈ ಸದನದಲ್ಲಿರುವ ಎಲ್ಲಾ ಕಡೆಯವರಿಗೂ ಇದು ಗೊತ್ತಿರುವ ವಿಷಯವಾಗಿದೆ. ನಾವು ಹೊಸದಾಗಿ ನಿಮ್ಮನ್ನು ಬೋರ್‌ವೆಲ್‌ಗಳನ್ನು ಮಾಡಿ ಎಂದು ಕೇಳುತ್ತಿಲ್ಲ. ದುಡ್ಡಿದ್ದರೆ ಮಾಡಿ ಇಲ್ಲದಿದ್ದರೆ ಬಿಡಿ. ಅದು ನಿಮ್ಮ ಸರ್ಕಾರಕ್ಕೆ ಬಿಟ್ಟದ್ದು. ಮಂಡಲ್ ಪಂಚಾಯತ್‌ಗಳು ನಿಮ್ಮ ಕಂಟ್ರೋಲ್‌ನಲ್ಲಿದೆ, ಅಡ್ಮಿನಿಸ್ಟ್ರೇಟರ್ಸ್ ಇದ್ದಾರೆ. ಅಲ್ಲಿರತಕ್ಕ ದುಡ್ಡನ್ನು ಜಿಲ್ಲಾಪರಿಷತ್ತಿಗೆ ತರಿಸಿಕೊಳ್ಳಿ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ನೀವು ಜಿಲ್ಲಾಪರಿಷತ್‌ನ ಮೂಲಕ, ಕೊನೆಪಕ್ಷ ರಿಪೇರಿ ಮಾಡುವಂಥ ಕೆಲಸ ಇವತ್ತು ಮಾಡುವುದಕ್ಕೆ ನಾನು ಆಜ್ಞೆ ಮಾಡುತ್ತೇನೆಂದು ಹೇಳಿದರೆ, ನಾವು ಇನ್ನೇನನ್ನು ಕೇಳುವುದಿಲ್ಲ. ನಿಮ್ಮ ಸಂಚಾರಿ ವಾಹನಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಆದ್ದರಿಂದ ಆ ಸಂಚಾರಿ ವಾಹನಗಳು ಇದ್ದರೂ ಏನೂ ಉಪಯೋಗವಾಗುವುದಿಲ್ಲ. ರಿಪೇರಿಯಾಗಬೇಕು ಮೂರು ನಾಲ್ಕು ತಿಂಗಳಾಗಿದೆ. ಮಾರ್ಚ್ ತಿಂಗಳು ಆದ ಮೇಲೆ ನಾವು ವಾಪಸ್ಸು ಹೋದಮೇಲೆ ಮತ್ತೆ ನಾವು ಯಾವಾಗ ಸೇರುತ್ತೇವೋ ಗೊತ್ತಿಲ್ಲ ದಯವಿಟ್ಟು ಇವತ್ತು ಆದೇಶ ಕೊಡಿ. ಜಿಲ್ಲಾಪರಿಷತ್‌ನವರಿಂದ ರಿಪೇರಿ ಕೆಲಸ ಮಾಡಿರುತ್ತೇವೆ. ಯಡಿಯೂರಪ್ಪನವರೇ ಎಂದು ಇಷ್ಟು ಹೇಳಿದರೆ ಸಾಕು. ಪ್ರತಿಯೊಂದು ತಾಲ್ಲೂಕಿನಲ್ಲೂ ಕಚೇರಿ ಇದೆ.

ಶ್ರೀ ಎಂ. ವೈ. ಘೋರ್ಪಡೆ : ಇದರ ಬಗ್ಗೆ ಆದೇಶ ಕೊಟ್ಟರೆ ಸಾಲದು. ಅವರನ್ನೇ ಇಲ್ಲಿ ಬರಮಾಡಿಕೊಂಡು , ಚೀಫ್ ಸೆಕ್ರೆಟರಿ ಅವರು ಅವರ ಹತ್ತಿರ ನೇರವಾಗಿ ಈ ವಿಚಾರವಾಗಿ ಬೇರೆ ಬೇರೆ ತಾಲ್ಲೂಕುಗಳಲ್ಲಿ ಏನು ಪರಿಸ್ಥಿತಿ ಇದೆ ತಿಳಿದುಕೊಂಡು ಅವರಿಗೆ ಏನಾದರೂ ತೊಂದರೆ ಇದ್ದರೆ ಅದನ್ನು ಸರಿಪಡಿಸಿ ರಿಪೇರಿ ಮಾಡುವಂಥ ವ್ಯವಸ್ಥೆ ಏನಿದೆ ಅದಕ್ಕೆ ಹಣದ ಅಭಾವವಿಲ್ಲ. ಸಿಬ್ಬಂದಿ ಅಭಾವವಿಲ್ಲ ಮತ್ತು ಸರ್ಕಾರದ ವಿಚಾರದ ಅಭಾವವೂ ಕೂಡ ಇಲ್ಲ. ಕಾರ್ಯಗತ ಮಾಡುವುದರಲ್ಲಿ ಎಫೆಕ್ಟೀವ್ ಆಗಿ, ಎಫಿಶಿಯೆಂಟ್ ಆಗಿ ಒಂದು ಪ್ರೋಗ್ರಾಂ ಹಾಕುತ್ತೇವೆ. ಈಗ ತಮಗೆ ಹೇಳಬೇಕಾದರೆ 12ನೇ ತಾರೀಖು 13ನೇ ತಾರೀಖಿಗೆ ಅವರನ್ನು ಕರೆಯಿಸಬೇಕೆಂದು ಇದ್ದೆವು. ಆದರೆ ಈಗ ಸ್ವಲ್ಪ ಅದನ್ನು ಮುಂದಕ್ಕೆ ಹಾಕಬೇಕಾಗಿದೆ. ಏತಕ್ಕೆಂದರೆ ನಾವು ಬಿಡುವಿಲ್ಲದ ಕೆಲಸ ಈ ಬಿಲ್ಲಿನ ವಿಷಯದಲ್ಲಿಯೇ ಇದ್ದೇವೆ. ಇನ್ನು ಒಂದು ವಾರದಲ್ಲಿ 16ನೇ ತಾರೀಖು ಆದಮೇಲೆ ಅವರನ್ನು ಕರೆಯಿಸುತ್ತೇವೆ. ಅಲ್ಲಿ ಕೇಳುತ್ತೇವೆ , ನೇರವಾಗಿ ನಿಮ್ಮ ತೊಂದರೆ ಏನಿದೆ, ವಾಹನದ ತೊಂದರೆ ಇದೆಯೇ, ಇನ್ನು ಏನು ತೊಂದರೆ ಇದೆ ಅದನ್ನೆಲ್ಲ ಸರಿಪಡಿಸುತ್ತೇವೆ. ನಾವು ಅತಿ ಹೆಚ್ಚಿನ ಆದ್ಯತೆಯನ್ನು ಇದಕ್ಕೆ ಕೊಡುತ್ತೇವೆ.

ಡಾ॥ ಎಸ್. ಬಿ. ನಂಜಪ್ಪ : ಎಲ್ಲಾ ವ್ಯವಸ್ಥೆ ಇದೆ, ಜವಾಬ್ದಾರಿಯನ್ನು ಗೊತ್ತು ಮಾಡಿಲ್ಲ.

Sri M.Y. GHORPADE: Any suggestions from all sides is always welcome. ಯಾವಾಗ ಬಿಡುವು ಇರುತ್ತದೆ, ಆವಾಗ ಅವರ ಜೊತೆ ಮಾತನಾಡುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, 1 ಲಕ್ಷ 24 ಸಾವಿರ ಕೊಳವೆ ಬಾವಿಗಳಲ್ಲಿ ಕೆಟ್ಟಿರತಕ್ಕಂಥದ್ದು ನನ್ನ ಅಂದಾಜಿನಲ್ಲಿ ಒಂದು ಲಕ್ಷ ಬಾವಿಗಳಲ್ಲಿ ನೀರಿನ ಮಟ್ಟ , ವಾಟರ್ ಲೆವಲ್‌ನಲ್ಲಿ ಅದು ಕೆಳಗಡೆ ಹೋಗಿದೆ. ಆದ್ದರಿಂದ ಇವತ್ತಿನ ದಿವಸ ಅನೇಕ ಕಡೆ ಬೋರ್‌ವೆಲ್‌ಗಳು ಕೆಟ್ಟು ಹೋಗಿವೆ ಎಂದು ಹೇಳುತ್ತೇವೆ. ನಮಗೆ ಗೊತ್ತಿರತಕ್ಕಂಥದ್ದು ಪಂಪ್‌ಹಾಕಿದರೆ ನೀರು ಬರುತ್ತದೆ ನೀರು ಬರದೇ ಇದ್ದರೆ ಕೆಟ್ಟು ಹೋಗಿದೆ ಎಂದು ಹೇಳುತ್ತಾರೆ. ಅದಕ್ಕೆ ಬಹಳ ಪ್ರಮುಖವಾದ ಕಾರಣ ವಾಟರ್ ಲೆವಲ್ ಏನಿದೆ ಅದು ಇನ್ನೂರು, ಮುನ್ನೂರು, ನಾನ್ನೂರು , ಐನೂರು ಅಡಿ ಕೆಳಗಡೆ ಹೋಗಿರತಕ್ಕಂಥದ್ದು. ಆದ್ದರಿಂದ ರಿಪೇರಿ ಜೊತೆಗೆ ಈ ರೀತಿಯಾಗಿ ಎಲ್ಲೆಲ್ಲಿ ವಾಟರ್ ಲೆವಲ್ ಕೆಳಗಡೆ ಹೋಗಿದೆ ಅಲ್ಲಿ ಕೂಡ ನೀರು ಒದಗಿಸುವುದಕ್ಕೆ ಇನ್ನೂ ಹೆಚ್ಚಿನ ಕೊಳವೆ ಬಾವಿಗಳನ್ನು ಹಾಕಿಸಲು ಸರ್ಕಾರ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ : ಸ್ವಾಮಿ, ವಾಟರ್ ಲೆವಲ್ ಕಡಿಮೆಯಾಗಿರುವುದು ನಿಜ. ಅದಕ್ಕೆ ಎರಡು ಕಾರಣಗಳಿವೆ. ಒಂದು ಬೇಸಿಗೆಯಲ್ಲಿ ಕಡಿಮೆಯಾಗುತ್ತದೆ. ಮಳೆ ಬಂದಾಗ ವಾಟರ್ ಲೆವಲ್ ಸರಿಯಾಗುತ್ತದೆ. ಇನ್ನು ಒಂದು ಸಂದರ್ಭದಲ್ಲಿ ಟೆಂಪರರಿಯಾಗಿ ವಾಟರ್ ಲೆವಲ್ ಕಡಿಮೆಯಾಗಿದ್ದುದು ನಮಗೆ ಗೊತ್ತಿದೆ. ಆದ್ದರಿಂದ ಎಲ್ಲಿ ನೀರು ಸಿಗುವುದಿಲ್ಲ, ಅಲ್ಲಿ ಕಷ್ಟವಾಗಿದೆ. ಇದರ ಬಗ್ಗೆ ಹೇಳಿಕೆ ಕೊಡಬೇಕೆನ್ನುವುದು ಒಂದು ವಿಚಾರ ಇದೆ.

ಶ್ರೀ ಆರ್. ವಿ. ದೇಶಪಾಂಡೆ : ನಾವು ಇದರ ಬಗ್ಗೆ ವಿಚಾರ ಎತ್ತಿದೆವು. ತಾವು ಸ್ಟೇಟ್‌ಮೆಂಟ್ ಕೊಡುತ್ತೇನೆಂದು ಹೇಳುತ್ತಿದ್ದೀರಿ.

ಶ್ರೀ ಎಂ. ವೈ. ಘೋರ್ಪಡೆ : ಸ್ಟೇಟ್‌ಮೆಂಟ್ ಎಂದರೆ ಒಂದು ಹತ್ತು ನಿಮಿಷದಲ್ಲಿ ನೀರಿನ ಪೊಜಿಷನ್ ಏನು ಎಂಬುದನ್ನು ಎಕ್ಸ್‌ಪ್ಲೈನ್ ಮಾಡುತ್ತೇನೆ. I will give a complete picture of water situation in Karnataka. I will give a statement.
ವಿಷಯಃ ರಾಜ್ಯದಲ್ಲಿ ವಿಫಲವಾದ ಕೊಳವೆ ಬಾವಿಗಳ ಸಂಖ್ಯೆ.

580(ತಡೆಹಿಡಿದ ಪ್ರಶ್ನೆ)
ಶ್ರೀ ಮಂಜುನಾಥ್ ಸಿ. ಕುನ್ನೂರು (ಶಿಗ್ಗಾಂವ್) : ಮಾನ್ಯ ಗ್ರಾಮಾಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಕಳೆದ ಮೂರು ವರ್ಷಗಳಿಂದ ಕುಡಿಯುವ ನೀರಿಗಾಗಿ ಕೊರೆದ ಕೊಳವೆ ಬಾವಿಗಳು ಎಷ್ಟು? ಅವುಗಳಲ್ಲಿ ವಿಫಲವಾದ ಕೊಳವೆ ಬಾವಿಗಳೆಷ್ಟು?
ಆ) ವಿಫಲವಾದ ಕೊಳವೆ ಬಾವಿಗಳಿಗೆ ಖರ್ಚಾದ ಹಣವೆಷ್ಟು?
ಇ) ಧಾರವಾಡ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕೊಳವೆ ಬಾವಿ ತೋಡಲಾಗಿದೆ? ಎಷ್ಟು ವಿಫಲವಾಗಿರುತ್ತದೆ?
ಈ) ಸದರಿ ಕೊಳವೆ ಬಾವಿಗಳನ್ನು ರಿಪೇರಿ ಮಾಡಲು ತೆಗೆದುಕೊಂಡ ಕ್ರಮಗಳೇನು?